**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ**

**ಸಿ ಸಿ ಸಂಖ್ಯೆ: 235/2025**

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ. ನರಸೀಪುರ ಆದ ನಾನು

1. ಸಿದ್ದರಾಜು ಉಃ ಪಾಪಣ್ಣ
   ಬಿನ್ ನಂಜುಂಡಸ್ವಾಮಿ
   32ವರ್ಷ.

2. ಪರಮೇಶ ಬಿನ್ ನಂಜುಂಡಸ್ವಾಮಿ
   27 ವರ್ಷ.

   1 ಮತ್ತು 2ನೇ ಆರೋಪಿತರ ವಾಸಃ
   ಚೌಹಳ್ಳಿ ಗ್ರಾಮ, ತಿ ನರಸೀಪುರ ತಾಲ್ಲೂಕು,
   ಮೈಸೂರ ಜಿಲ್ಲೆ.

3. ಮಹೇಶ ಬಿನ್ ಪುಟ್ಟಸ್ವಾಮಿ
   22 ವರ್ಷ, ವಾಸಃ ಗಾಣಿಗನೂರು ಗ್ರಾಮ,
   ನಂಜನಗೂಡು ತಾಲ್ಲೂಕು,
   ಮೈಸೂರು ಜಿಲ್ಲೆ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಎನೆಂದರೆ :-

ಮೊದಲನೆಯದಾಗಿ, ದಿನಾಂಕ 1103.2023 ರಂದು ರಾತ್ರಿ 12.00 ಗಂಟೆ ಸಮಯದಲ್ಲಿ, ತಿ.ನರಸೀಪುರ ಪೊಲೀಸ್ ಠಾಣಾ ವ್ಯಾಪ್ತಿಯ, ತಿ. ನರಸೀಪುರ ಪಟ್ಟಣದ

ಚಿಕ್ಕಮ್ಮ ತಾಯಿ ಛತ್ರದ ಮುಂಭಾಗ, ಸಮಾನ ಉದ್ದೇಶದಿಂದ, 1ನೇ ಆರೋಪಿತರಾದ ನೀವು ಚಾಸಾ-1/ಸಿದ್ದರಾಜು ರವರ ಜೊತೆ ಗಲಾಟೆ ಮಾಡಿ, ಅವರನ್ನು ಉದ್ದೇಶಿಸಿ, "ಬೋಳಿ ಮಗನೆ, ಸೂಳೆ ಮಗನೆ" ಎಂಬ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮಧಿಗೆ ಭಂಗ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 2 ಮತ್ತು 2ನೇ ಆರೋಪಿತರಾದ ನೀವು ಚಾಸಾ-1 ರವರನ್ನು ಅಕ್ರಮವಾಗಿ ತಬ್ಬಿ ಹಿಡಿದುಕೊಂಡು ಅವರಿಗೆ ಅಕ್ರಮ ತಡೆ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 1ನೇ ಆರೋಪಿತರಾದ ನೀವು ನಿಮ್ಮ ಕೈಗಳಿಂದ ಚಾಸಾ-1 ರವರ ಮೈಕೈಗೆ ಮತ್ತು ಬೆನ್ನಿಗೆ ಹೊಡೆದು ಅವರಿಗೆ ಸಾದಾ ಸ್ವರೂಪದ ನೋವುಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 1 ಮತ್ತು 3ಆರೋಪಿತರಾದ ನೀವು ಚಾಸಾ-1ರವರ ಮೋಟಾರ್ ಸೈಕಲ್

ನ ಪೆಟ್ರೋಲ್ ಪೈಪ್ ನ್ನು ಕಿತ್ತು ಹಾಕಿ ಬೆಂಕಿ ಹಾಕುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 435 ಸಹಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಐದನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಚಾಸಾ–1ರವರ ಮೋಟಾರ್ ಸೈಕಲನ್ನು ಸುಟ್ಟು ಹಾಕಿ ಅವರಿಗೆ ರೂ.40,000 ರಿಂದ ರೂ.50,000 ನಷ್ಟ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 427 ಸಹಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಆರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಚಾಸಾ–1ರವರಿಗೆ ಪ್ರಾಣ ಬೆದರಿಕೆ ಉಂಟು ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ

ದಿನಾಂಕ 07.02.2026

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ತಿ. ನರಸೀಪುರ**

**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ**

**ಸಿ ಸಿ ಸಂಖ್ಯೆ: 235/2025**

## ದೋಷಾರೋಪಣೆ

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಟಿ ನರಸೀಪುರ ಆದ ನಾನು

1. ಸಿದ್ದರಾಜು ಉಃ ಪಾಪಣ್ಣ
ಬಿನ್ ನಂಜುಂಡಸ್ವಾಮಿ
32ವರ್ಷ.

2. ಪರಮೇಶ ಬಿನ್ ನಂಜುಂಡಸ್ವಾಮಿ
27 ವರ್ಷ.

1 ಮತ್ತು 2ನೇ ಆರೋಪಿತರ ವಾಸಃ
ಚೌಹಳ್ಳಿ ಗ್ರಾಮ, ತಿ ನರಸೀಪುರ ತಾಲ್ಲೂಕು,
ಮೈಸೂರ ಜಿಲ್ಲೆ.

3. ಮಹೇಶ ಬಿನ್ ಪುಟ್ಟಸ್ವಾಮಿ
22 ವರ್ಷ, ವಾಸಃ ಗಾಣಿಗನೂರು ಗ್ರಾಮ,
ನಂಜನಗೂಡು ತಾಲ್ಲೂಕು,
ಮೈಸೂರು ಜಿಲ್ಲೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?
ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ದ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**ದಿನಾಂಕ 07.03.2026**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ತಿ. ನರಸೀಪುರ**